**1ನೇ ಅಪರ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ., ರವರ ನ್ಯಾಯಾಲಯ ಬೆಳಗಾವಿ.**

ಓ.ಎಸ್ ನಂ. 1011/2016

| | | |
|---|---|---|
| ಸಾಕ್ಷಿದಾರರ ಹೆಸರುಃ | ಸಂದೀಪ ಬಿ. ತುಬಚಿ | ಸಿ ಡಬ್ಲ್ಯೂಃ 1 |
| ತಂದೆಯ ಹೆಸರುಃ | ಬಸವರಾಜ | |
| ವಯಸ್ಸುಃ | 54ವರ್ಷ | |
| ಉದ್ಯೋಗಃ | ಸಿವಿಲ್ ಇಂಜನೀಯರ | ಪ್ರ.ವ .ಬೋ.ದಿಃ |
| ವಾಸಸ್ಥಳಃ | ಬೆಳಗಾವಿ | 18.03.2026 |

**ಮುಖ್ಯ ವಿಚಾರಣೆಃ ನ್ಯಾಯಾಲಯದ ಪರಃ**

ನಾನು ನ್ಯಾಯಾಲಯದ ಆದೇಶದಂತೆ ಕಮೀಷನರ್ ವಾರೆಂಟ್‌ನ್ನು ದಿನಾಂಕ 10.03.2017 ರಂದು ಜಾರಿ ಮಾಡಿರುತ್ತೇನೆ. ಕಮಿಷನರ ವರದಿಯನ್ನು ನಿಪಿ 1 ಎಂದು, ನಕಾಶೆಗಳನ್ನು ನಿಸಿ 2 ರಿಂದ 4 ಎಂದು, ಅಳತೆ ಮಾಡುವ ಸಮಯದಲ್ಲಿ ತಯಾರಿಸಿದ ಸ್ಕೈಟ ಮ್ಯಾಪನ್ನು ನಿಸಿ 5 ಎಂದು, ವಾದಿ ಮತ್ತು ಪ್ರತಿವಾದಿಯ ಸೂಚನಾವಳಿಗಳನ್ನು ನಿಸಿ 6 ಮತ್ತು 7 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಾದ ಶ್ರೀ R.L.P. ರವರಿಂದಃ**

ನನಗೆ ವಾರಂಟ ನೀಡುವ ಪೂರ್ವದಲ್ಲಿ ಸೂಚನಾವಳಿಗಳನ್ನು ಕೊಡಲಾಗಿತ್ತು ಎಂದರೆ ಸರಿ. ಸೂಕ್ತವಾದ ದಾಖಲೆಗಳನ್ನು ನೋಡಿ ವಾರಂಟ ಜಾರಿ ಮಾಡಬೇಕು ಎಂದು ಸೂಚನಾವಳಿಗಳಲ್ಲಿ ಬರೆದಿದೆ ಎಂದರೆ ಸರಿ. ನಾನು ಯಾವ ದಾಖಲೆಗಳನ್ನು ನೋಡಿದ್ದೇನೆ ಎಂದು ನನ್ನ ವರದಿಯೊಂದಿಗೆ

ಲಗತ್ತಿಸಿಲ್ಲ. ನಾನು ದಾಖಲೆಗಳನ್ನು ನೋಡದೇ ಅಳತೆ ಮಾಡಿದ್ದೇನೆ ಎಂದರೆ ಸರಿಯಲ್ಲ. ನಾನು ಪೂರ್ವ ಪಶ್ಚಿಮ ಉತ್ತರ ದಕ್ಷಿಣ ಎಷ್ಟು ಅಳತೆ ಇದೆ ಎಂದು ಬರೆದಿಲ್ಲ ಎಂದರೆ ಸರಿ. ನಾನು ಪಂಚಾಯತಿಯಿಂದ ದಾಖಲೆಗಳನ್ನು ಪಡೆದುಕೊಂಡಿಲ್ಲ. ನಾನು ಎಲ್ಲಾ ದಿಕ್ಕುಗಳಲ್ಲಿ ಅಳತೆ ಮಾಡದೇ ಒತ್ತುವರಿ ತೋರಿದ್ದೇನೆ ಎಂದರೆ ಸರಿಯಲ್ಲ. ನಾನು ಅಳತೆ ಮಾಡದ ಕಾರಣ ಪಂಚನಾಮೆ ತಯಾರಿಸಿಲ್ಲ ಎಂದರೆ ಸರಿಯಲ್ಲ. ನಾನು ರಸ್ತೆ ಎಷ್ಟು ಅಳತೆ ಇದೆ ಎಂಬ ಬಗ್ಗೆ ಪಂಚಾಯತಿಯ ದಾಖಲೆ ಪಡೆದುಕೊಂಡಿಲ್ಲ. ನಾನು ಆಸ್ತಿಗಳ ದಾಖಲೆಗಳನ್ನು ನೋಡದೇ ವರದಿ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ನಾನು ಕಚೇರಿಯಲ್ಲಿ ಕುಳಿತು ವರದಿ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ನಾನು ಸೂಚನಾವಳಿಗಳನ್ನು ಪಾಲಿಸಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

**ತೆರೆದ ನ್ಯಾಯಾಲಯದಲ್ಲಿ ಈ ಮೇಲೆ ಸಾಕ್ಷಿ ಸ್ವತಃ ಹೇಳಿದ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.**

ಓ ಹೇ ಕೇ ಸ ಇದೆ.

Sd/-

**1ನೇ ಅಪರ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ.,**
**ಬೆಳಗಾವಿ.**